


ಆಗಿತ್ತು: 'ಆ...' ಎಂದು ಬಾಯ್ಕಳಿದು ಕೂತು, ವಿಧವಿಧ ಹತಾರಗಳಿಗೆ ಹಲ್ಲನ್ನೊಡ್ಡಿ, ಕಣ್ಣ ಮುಂದೆಯೇ ಜರುಗುವ ಘನಘೋರ ನರಕವನ್ನು ಹಲ್ಲುಕಚ್ಚಿ ಸಹಿಸುವ ಕರ್ಮಕಾಂಡಕ್ಕಾಗಿ!

ಅಂತೂ ಇಂತೂ ಆ ದಿನ ಬಂತು, ಇನ್ನು ಈ ನೋವು ತಡೆಯಲಾರೆನೆಂಬ ದಿನ. ತುದಿನಾಲಗೆಯ ಸ್ಪರ್ಶಕ್ಕೆ ಅರಿವಾಗುತ್ತಿದ್ದ ಕುಳಿಯಿಂದಲೇ ಏನೋ ಘಟಿಸಬಾರದ್ದು ಘಟಿಸಿದೆ ಎಂದು ನಾನು ಊಹಿಸಿದ್ದು ನಿಜವೇ ಆಯಿತು. 'ವಿಸ್ಡಮ್ ಟೀಥ್‌ನ ಒಂದು ಭಾಗ ಮುರಿದು ಹೋಗಿದೆ, ಅದನ್ನು ಕಿತ್ತು ಹಾಕಬೇಕು' ಅಂದರು ಫಳಫಳ ಮಿಂಚುವ ಹಲ್ಲಿನ ಡಾಕ್ಟರು. 'ಅಯ್ಯೋ! ಹಾಗಾದ್ರೆ ನನ್ನ ವಿಸ್ಡಮ್ ಕಥೆ!?' ಎಂದು ಆತಂಕಕ್ಕೊಳಗಾದ ನನ್ನನ್ನು ತಮ್ಮ ಅದೇ ಮಿಂಚುನಗುವಿನ ಜೊತೆಗೆ ಡಾಕ್ಟರ್, 'ವಯಸ್ಸಾಗ್ತ ವಯಸ್ಸಾಗ್ತ ಎಲ್ರ ವಿಸ್ಡಮ್ಮು ಹಿಂಗೇ ಮೇಡಂ' ಅಂದರು.

ಇದೊಳ್ಳೆ ಕಥೆಯಾತ್ತಲ್ಲಪ್ಪ ಅಂದುಕೊಳ್ಳುತ್ತ ನಾನು, 'ಇದಕ್ಕೇ ಕ್ಯಾಪ್ ಹಾಕೋದು ಅಥವಾ ರೂಟ್ ಕ್ಯಾನಲ್ ಮಾಡೋಕ್ಕಾಗಲ್ವ?' ಅಂತ ಕೇಳಿದರೆ, 'ಇಲ್ಲ